**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 25.09.2024.**

**ಮುಂದುವರೆದ ಪಾಟೀ ಸವಾಲು : ಶ್ರೀ ಸಿ.ಎಂ. ವಾದಿ ಪರ ವಕೀಲರಿಂದ**

ಈ ದಿನವು 2 ನೇ ಪ್ರತಿವಾದಿ ನ್ಯಾಯಾಲಯದಲ್ಲಿ ಹಾಜರು ಇದ್ದಾರೆ. ಅವರ ಪರವಾಗಿ 2 ನೇ ಪ್ರತಿವಾದಿಯು ಸಾಕ್ಷ್ಯ ನುಡಿಯಲು ತೊಂದರೆ ಇರುವುದಿಲ್ಲ. ಬಳೆಗೆರೆ ಗ್ರಾಮದ ಸ.ನಂ.195 ರ ಸ್ವತ್ತಿನಲ್ಲಿ ಹಕ್ಕು ಪತ್ರ ಪಡೆದ ದಿನಾಂಕದಿಂದ ವಾದಿಯ ಪೂರ್ವಿಕರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ನಾವೇ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನ ಸ್ವಾಧೀನ ಕಸಿದುಕೊಳ್ಳುತ್ತಿದ್ದೇನೆ ಎಂದು ನನ್ನ ವಿರುದ್ಧ ವಾದಿಯು ಪೋಲಿಸರಿಗೆ ದೂರು ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಸ್ವತಃ ದಾವಾ ಸ್ವತ್ತಿನಲ್ಲಿ ನನ್ನ ತಂದೆ ಸ್ವಾಧೀನದಲ್ಲಿದ್ದು, ನನ್ನ ಮಾವ ನರಸಿಂಹಮೂರ್ತಿರವರಿಗೆ ಸದರಿ ನಿವೇಶನದಲ್ಲಿ ಹುಲ್ಲಿನ ಬಣವೆ ಹಾಕಿಕೊಳ್ಳಲು ನನ್ನ ತಂದೆಯು ತಿಳಿಸಿದ್ದರು, ನಾನು ಬೆಂಗಳೂರಿನಲ್ಲಿ ವಾಸವಿದ್ದೆ. ವಾದಿಯೂ ಸಹ ನನ್ನ ಮಾವನ ಒಪ್ಪಿಗೆ ಪಡೆದು ಸದರಿ ನಿವೇಶನದಲ್ಲಿ 6 ತಿಂಗಳಿನಿಂದ ಹುಲ್ಲಿನ ಬಣವೆ ಹಾಕಿದ್ದು, ನಾನು ಅದನ್ನು ಪ್ರಶ್ನಿಸಲಾಗಿ ಸದರಿ ನಿವೇಶನ ನನ್ನದು ಎಂದು ವಾದಿಯು ತಿಳಿಸಿದ್ದರು ಎಂದು ನುಡಿಯುತ್ತಾರೆ. ವಾದಿಯು ದಾವಾ ಸ್ವತ್ತಿನಲ್ಲಿ ಬಣವೆ ಹಾಕಿದ್ದು, ನಾನು ಅದನ್ನು ತೆರವು ಮಾಡಲು ಪ್ರಯತ್ನಿಸಿದ್ದೆ ಎಂದರೆ ಸರಿ.

ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆ 2014-15 ನೇ ಸಾಲಿನಲ್ಲಿ ಮೃತರಾದರು. ನಮ್ಮ ಬಳಿ ಹಸುಗಳು ಇರುವುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು

ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋದಲ್ಲಿ ಕಾಣುವ ಬಣವೆಯನ್ನು ವಾದಿಯು ಹಾಕಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು **ನಿಪಿ–7** ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋದಲ್ಲಿ ಕಾಣುವ ಬಣವೆಯನ್ನು ನಾನು ಮತ್ತು 2 ನೇ ಪ್ರತಿವಾದಿ ತೆರವು ಮಾಡಲು ಪ್ರಯತ್ನಿಸಿರುವುದಾಗಿ ನುಡಿದಿದ್ದು, ಸದರಿ ಫೋಟೋವನ್ನು **ನಿಪಿ–8** ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋದಲ್ಲಿ ಕಾಣುವ ಹಸುವನ್ನು ವಾದಿಯು ತನ್ನ ಜಾಗದಲ್ಲಿ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು **ನಿಪಿ–9** ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತಃ ನಿಪಿ–9 ರಲ್ಲಿ ಕಾಣುವ ಹುಲ್ಲಿನ ಬಣವೆಯು ನಮ್ಮ ಸ್ವತ್ತಿನಲ್ಲಿ ಇದೆ ಎಂದು ನುಡಿಯುತ್ತಾರೆ. ವಾದಿಯು ಹುಲ್ಲಿನ ಬಣವೆಯನ್ನು ನಿವೇಶನ ಸಂಖ್ಯೆ 196 ಅಂದರೆ ನಮ್ಮ ಸ್ವತ್ತಿನಲ್ಲಿ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಹುಲ್ಲಿನ ಬಣವೆಯನ್ನು ಕಾನೂನು ಪ್ರಕಾರವೇ ತೆರವು ಮಾಡಬೇಕು ಎಂದರೆ ಸರಿ. ಹುಲ್ಲಿನ ಬಣವೆಯನ್ನು ವಾದಿಯು ನಮ್ಮ ಸ್ವತ್ತಿನಲ್ಲಿ ಹಾಕಿದ್ದಾರೆ ಎಂದು ನಾನು ಪೋಲಿಸ್ ಠಾಣೆಯಲ್ಲಿ ದೂರು ನೀಡಿಲ್ಲ ಎಂದರೆ ಸರಿ. ಸಾಕ್ಷಿಯೇ ಸ್ವತಃ ವಾದಿಯೇ ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದು ನುಡಿಯುತ್ತಾರೆ. ಪೋಲಿಸರು ಇಬ್ಬರನ್ನೂ ಠಾಣೆಗೆ ಕರೆಯಿಸಿ ನಮ್ಮ ಸ್ವತ್ತಿನಲ್ಲಿ ಬಣವೆಯನ್ನು ಏಕೆ ಹಾಕಿದ್ದೀರಾ ಎಂದು ವಾದಿಗಳಿಗೆ ಬೈದು ಕಳುಹಿಸಿದರು ಎಂದು ನುಡಿಯುತ್ತಾರೆ. ಹುಲ್ಲಿನ ಬಣವೆ ಹಾಕಿರುವ

ಜಾಗವು ನಿವೇಶನ ಸಂಖ್ಯೆ 196 ಕ್ಕೆ ಸಂಬಂಧಪಟ್ಟಿದ್ದು ಎಂದು ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ವಾದಿಯು ನನ್ನ ಮಾವನಾದ ನರಸಿಂಹಮೂರ್ತಿರವರ ಒಪ್ಪಿಗೆಪಡೆದು ಸ್ವತ್ತಿನ ಸಂಖ್ಯೆ 196 ರಲ್ಲಿ ಬಣವೆ ಹಾಕಿದ್ದು, ಅವರನ್ನು ನನ್ನ ಪರವಾಗಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ಬಣವೆಯನ್ನು ತೆರವುಗೊಳಿಸಲು ಪ್ರಯತ್ನಿಸಿದ್ದೆ ಎಂದು ನನ್ನ ಪ್ರಮಾಣಪತ್ರ ಹಾಗೂ ತಕರಾರಿನಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ ನಿಪಿ-7 ರಿಂದ 9 ರಲ್ಲಿ ಕಂಡು ಬರುವ ಹುಲ್ಲಿನ ಬಣವೆಯು ದಾವಾ ಸ್ವತ್ತಿನಲ್ಲಿದೆ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿಯು ಪಂಚಾಯತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ದಾಖಲಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನಾವು ಪೋಲಿಸ್ ಠಾಣೆಗೆ ಹೋಗಿ ಬಂದ ಮೇಲೆ ಬಣವೆ ಇದ್ದ ಜಾಗಕ್ಕೆ ಮುಳ್ಳು ತಂತಿ ಬೇಲಿ ಹಾಕಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನನಗಾಗಲೀ 2 ನೇ ಪ್ರತಿವಾದಿಗಾಗಲೀ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗೌರಿಬಿದನೂರು.